ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :- ಖಂಡಿತವಾಗಿ ಅದನ್ನು ತರಿಸಿಕೊಡೋಣ. ಮುಖ್ಯವಾಗಿ ಈ ಜಿಪ್ಸಮ್ ಮಾರುತ್ತಿದ್ದಾರೆ ಎಂಬ ಬಗ್ಗೆ ಈಗ ತಾನೆ ಹೇಳಿದ್ದೀರಿ, ಅದರ ಬಗ್ಗೆ ತಮ್ಮ ಹತ್ತಿರ ದಾಖಲೆಗಳು ಮತ್ತು ಪತ್ರಗಳು ಇದ್ದರೆ ಅವುಗಳನ್ನು ದಯವಿಟ್ಟು ಕಳುಹಿಸಿಕೊಡಿ ನಾನು ಖಂಡಿತವಾಗಿ ವಿಚಾರಮಾಡಿ ಏನಾದರೂ ಅಕ್ರಮಗಳು ನಡೆದಿದ್ದರೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ ತಾವು ನಮ್ಮ ರಕ್ಷಣೆಗೆ ಬರಬೇಕು. ನಾನು ಒಬ್ಬ ಶಾಸಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಜಿಲ್ಲೆಯಲ್ಲಿರತಕ್ಕ ಆ ಕಾರ್ಖಾನೆ ಉಳಿಯಬೇಕು, ನಮ್ಮ ನಾಡಿನ ರೈತ ಉಳಿಯಬೇಕು ಎಂಬ ಉದ್ದೇಶದಿಂದ ಪ್ರಸ್ತಾಪಮಾಡಿದ್ದೇನೆ. ಜವಾಬ್ದಾರಿವುಳ್ಳವರಾದ ಪ್ರಫುಲ್ಲ ಚಂದ್ರ ಎಂಬುವರು ಸಾಕಷ್ಟು ರೈತಾಪಿ ಕೆಲಸಗಳಲ್ಲಿ ಪರಿಣತರಾದ ವ್ಯಕ್ತಿ ಅವರು ಒಂದು ಪತ್ರ ಬರೆದು ಇದನ್ನು ತಕ್ಷಣ ಗಮನಿಸಬೇಕು ಎಂದು ಹೇಳಿದ್ದಾರೆ. ಆದ್ದರಿಂದ ನಾನು ಈಗ 15 ದಿವಸಗಳ ಹಿಂದೆ ನೋಟಿಸ್ ಕೊಟ್ಟು ಅದುಬರುವ ಹಾಗೆ ಮಾಡಿ, ಈಗ ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇಷ್ಟಾದರೂ ಕೂಡ ಸರ್ಕಾರ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡದಿದ್ದರೆ ಹೇಗೆ? ಎಷ್ಟು ವರ್ಷಕ್ಕೆ ಹರಾಜಾಯಿತು? ಯಾರಿಗೆ ಹರಾಜಾಯಿತು? ಷರತ್ತುಗಳು ಏನು ಎಂಬುದನ್ನು ಹೇಳುವುದಿಲ್ಲ ಎಂದರೆ ಅಲ್ಲಿರತಕ್ಕ ಏಜನ್ಸಿಗಳು, ಅಧಿಕಾರಿಗಳು ಶಾಮಿಲಾಗಿ ರೈತರಿಗೆ ಮೋಸ ಮಾಡುತ್ತಿದ್ದಾರೆ, ಕಾರ್ಖಾನೆಗೆ ಬರತಕ್ಕ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ತಾವು ಬೇರೆ ಸಂದರ್ಭದಲ್ಲಿ ಉತ್ತರಕೊಡಿ.

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಸಚಿವೆಯರು ಹೇಳುವುದಿಲ್ಲ ಎಂದು ಹೇಳಲಿಲ್ಲ. ಈಗ ನೀವು ಅಧಿಕಾರಿಗಳು ಏನೋ ಶಾಮಿಲಾಗಿದ್ದಾರೆ ಎನ್ನತಕ್ಕ ರೀತಿಯಲ್ಲಿ ಇದೆ ಎಂದು ಅವರು ಏನು ಹೇಳಿದ್ದಾರೆ ಇದರ ಬಗ್ಗೆ ನಾನು ಹೆಚ್ಚು ಮಾಹಿತಿಯನ್ನು ತರಿಸಿ ತಮಗೆ ಒದಗಿಸುತ್ತೇನೆಂದು ಹೇಳಿದ್ದಾರೆ. ಈಗ ಸದನದ ಮುಂದೆ ಕೈಗಾರಿಕೆ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಬೇಡಿಕೆಗಳು ಬರುತ್ತಿವೆ. ಇವೊತ್ತು ನಾಳೆ ಆಗತಕ್ಕ ಚರ್ಚಾ ಸಮಯದಲ್ಲಿ ಇದರ ಬಗ್ಗೆ ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇಲ್ಲಿ ಒಂದು ಅಂಶವನ್ನು ತಾವು ಗಮನಿಸಬೇಕು. ಇಂಥ ಪ್ರಾಮುಖ್ಯವಾದ ವಿಷಯವನ್ನು ಕಾಲಿಂಗ್ ಅಟೆನ್‌ಷನ್‌ನಲ್ಲಿ ತಂದಾಗ ಅದಕ್ಕೆ ಬೇಕಾದ ಮಿನಿಮಮ್ ಮಾಹಿತಿಯನ್ನು ಅಧಿಕಾರಿಗಳು ಕೊಡುವುದಿಲ್ಲ ಎಂದರೆ ಅಧಿಕಾರಿಗಳ ಕೈವಾಡ ಇದೆ ಎಂದು ಹೇಳಬೇಕಾಗುತ್ತದೆ. ಮಂತ್ರಿಗಳು ಮೊನ್ನೆ ಬಂದಿರತಕ್ಕವರು ಅವರು ಏನು ಮಾಡುತ್ತಾರೆ ಪಾಪ, ಎಲ್ಲಾ ಅಧಿಕಾರಿಗಳು ಮಾಡುವುದು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :- ಕಳೆದ ವರ್ಷ ಸಪ್ಟೆಂಬರ್‌ನಲ್ಲಿ ಕಾಲ್‌ಫಾರ್ ಮಾಡಿದರು. 12 ಜನ ಟೆಂಡರ್ ಹಾಕಿದ್ದರು ಹೈಯಸ್ಟ್ ಬಿಡ್ಡರ್‌ಗೆ ಇದನ್ನು ಕೊಟ್ಟರು, ಇದು ಒಂದು ವರ್ಷಕ್ಕೆ ಎಂದು ಹೇಳಿ ಕೊಟ್ಟಿದ್ದಾರೆ. ಈ ವರ್ಷ ಸೆಪ್ಟೆಂಬರ್‌ವರೆಗೆ ಮಾತ್ರ ಲಿಫ್ಟ್ ಮಾಡಲು ಅಧಿಕಾರ ಇದೆ.

ಬೆಳಗಾವಿ, ಸಂಕೇಶ್ವರ ಹುಕ್ಕೇರಿ ಮುಂತಾದ ಕಡೆಗಳಲ್ಲಿ ಕುಡಿಯುವ ನೀರನ್ನು ಒದಗಿಸುವುದು.

ಶ್ರೀ ಐ.ಎಂ.ಷೇಡ್‌ಶ್ಯಾಳ:- ಬೆಳಗಾಂ ಜಿಲ್ಲೆಯ ಬೆಳಗಾವಿ-ಸಂಕೇಶ್ವರ, ಹುಕ್ಕೇರಿ ಮುಂತಾದ ಕಡೆಗಳಲ್ಲಿ ನೀರು ಸರಬರಾಜಿಗೆ ಹಣ ಒದಗಿಸುವುದರಲ್ಲಿ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ನಗರಾಭಿವದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ,

1) ಬೆಳಗಾವಿ ಅಭಿವೃದ್ಧಿ ನೀರು ಸರಬರಾಜು ಯೋಜನೆ 3ನೇ ಹಂತ:-

ಹಿಡಕಲ್ ಜಲಾಶಯವನ್ನು ಮೂಲವಾಗಿಟ್ಟುಕೊಂಡು 2560-00 ಲಕ್ಷ ರೂ.ಗಳ ಯೋಜನೆಯನ್ನು ಸರ್ಕಾರವು ತನ್ನ ಆಜ್ಞೆ ಸಂಖ್ಯೆ : ವನಇ 214 ಯುಎಂಎಸ್ 89, ದಿನಾಂಕ 30-3-90ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಹಣಕಾಸಿನ ವ್ಯವಸ್ಥೆ ಈ ಕೆಳಕಂಡಂತೆ ಇದೆ.

ಜೀವವಿಮಾ ನಿಗಮದ ಸಾಲ	-	ರೂ. 1280.00 ಲಕ್ಷ
ಬೆಳಗಾವಿ ಮಹಾನಗರ ಪಾಲಿಕೆ ವಂತಿಕೆ	-	ರೂ. 384.00 ಲಕ್ಷ
'ಬೂಡಾ' ವಂತಿಕೆ	-	ರೂ. 384.00 ಲಕ್ಷ
ಇತರರ ವಂತಿಕೆ	-	ರೂ. 512.00 ಲಕ್ಷ
	ಒಟ್ಟು	ರೂ. 2560.00 ಲಕ್ಷ

ಈಗ ಈ ಯೋಜನೆಗೆ 512.00 ಲಕ್ಷ ಬಂದಿದೆ. ಕೆಲಸ ಪ್ರಾರಂಭವಾಗಿದೆ.

ಇಲ್ಲಿಯವರೆಗೆ ಎಲ್ಲಾ ಸಂಸ್ಥೆಗಳಿಂದ ಬಂದ ಹಣದ ವಿವರಗಳು ಈ ಕೆಳಕಂಡಂತೆ ಇದೆ:

ಜೀವವಿಮಾ ನಿಗಮದ ಸಾಲ	-	ರೂ. 200.00 ಲಕ್ಷ
ಬೆಳಗಾವಿ ಮಹಾನಗರ ಪಾಲಿಕೆ ವಂತಿಕೆ	-	ರೂ. 50.00 ಲಕ್ಷ
'ಬೂಡಾ' ವಂತಿಕೆ	-	ರೂ. 96.00 ಲಕ್ಷ
ಇಂಡಾಲ್ ವಂತಿಕೆ	-	ರೂ. 175.00 ಲಕ್ಷ
	ಒಟ್ಟು:	ರೂ. 512.00 ಲಕ್ಷ

ಈ ಯೋಜನೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು 3 ಪಿ.ಎಸ್.ಸಿ, ಕೊಳವೆ ಮಾರ್ಗಗಳನ್ನು ಅಂದರೆ 900 ಮಿ.ಮಿ. ವ್ಯಾಸದ, 1200 ಮಿ.ಮಿ. ವ್ಯಾಸದ ಮತ್ತು 1100 ಮಿ.ಮಿ ವ್ಯಾಸದ, 6.18 ಕಿ.ಮಿ. 14.66 ಕಿ.ಮಿ. ಹಾಗೂ 16.10 ಕಿ. ಮಿ ಉದ್ದದ ಒಟ್ಟು 10.00 ಕೋಟಿ ರೂಗಳ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಸ್ಟೀಲ್‌ಪೈಪುಗಳನ್ನು ಖರೀದಿಸಲು 'ಸೇಲ್' ಪ್ರಾಧಿಕಾರಿಕ್ಕೆ 2.00 ಕೋಟಿ ರೂ. ಗಳನ್ನು ತುಂಬಲಾಗಿದೆ. ಮಾರ್ಚ್ 1993ರಿಂದ ಪೈಪುಗಳು ಹಿಡಕಲ್‌ನಿಂದ ಬರುತ್ತಿದೆ.

ಮೂಲಸ್ಥಾವರದ ಕಾಮಗಾರಿಗಳಿಗೆ, 4 ಸಂಖ್ಯೆ ಜಲಸಂಗ್ರಹಾರಗಳನ್ನು ಕಟ್ಟಲು ಹಾಗೂ 2 ಸಂಖ್ಯೆ ಪಂಪ್ ಹೌಸ್‌ಗಳನ್ನು ವಿವಿಧ ಸ್ಥಳಗಳಲ್ಲಿ ಕಟ್ಟಲು ಟೆಂಡರ್ ಕರೆಯಲಾಗಿದೆ. ಸಧ್ಯದಲ್ಲೇ ಗುತ್ತಿಗೆದಾರರನ್ನು ನೇಮಿಸಿ ಕೆಲಸಗಳನ್ನು ಪ್ರಾರಂಭಿಸಲಾಗುವುದು. ಸಧ್ಯಕ್ಕೆ ಈ ಯೋಜನೆಗೆ ಹಣದ ಕೊರತೆ ಇಲ್ಲ. ಈ ಯೋಜನೆಯನ್ನು ಮಾರ್ಚ 1996ರ ಹೊತ್ತಿಗೆ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ.

2) ಹುಕ್ಕೇರಿ-ಸಂಕೇಶ್ವರ ಹಾಗೂ ಸುತ್ತಮುತ್ತಲಿನ 16 ಹಳ್ಳಿಗಳಿಗೆ ಸೇರಿ ಜಂಟಿ ನೀರು ಸರಬರಾಜು ಯೋಜನೆ:-

ಹಿಡಕಲ್ ಜಲಾಶಯವನ್ನು ಮೂಲವಾಗಿಟ್ಟುಕೊಂಡು 500.00 ಲಕ್ಷ ರೂ.ಗಳ ಯೋಜನೆಯನ್ನು ಸರ್ಕಾರವು ತನ್ನ ಆಜ್ಞೆ ಸಂಖ್ಯೆ : ವನಇ 214 ಯುಎಂಎಸ್ 89, ದಿನಾಂಕ 30-3-90ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಹಣಕಾಸಿನ ವ್ಯವಸ್ಥೆ ಈ ಕೆಳಕಂಡಂತೆ ಇದೆ.

ಜೀವ ವಿಮಾ ನಿಗಮದ ಸಾಲ	-	ರೂ. 334.00 ಲಕ್ಷ
ಸರ್ಕಾರದ ಅನುದಾನ	-	ರೂ. 107.00 ಲಕ್ಷ
ಸಂಕೇಶ್ವರ ಪುರಸಭೆ ವಂತಿಕೆ	-	ರೂ. 59.00 ಲಕ್ಷ
	ಒಟ್ಟು:	ರೂ. 500.00 ಲಕ್ಷ

ಇಲ್ಲಿಯವರೆಗೆ ಜೀವ ವಿಮಾ ನಿಗಮದಿಂದ 75.00 ಲಕ್ಷ ರೂ.ಗಳು ಹಾಗೂ ಸರ್ಕಾರದಿಂದ 53.82 ಲಕ್ಷ ರೂಗಳು ಬಂದಿದೆ.

500 ಮಿ.ಮಿ ವ್ಯಾಸದ ಪಿ.ಎಸ್. ಸಿ. ಕೊಳವೆ ಮಾರ್ಗಗಳನ್ನು ಹಾಕುವ 3.00 ಕೋಟಿ ರೂ.ಗಳ ಕಾಮಗಾರಿಕೆ ಗುತ್ತಿಗೆದಾರರನ್ನು ನೇಮಿಸಿದ್ದು ಪೈಪುಗಳು ಬರುತ್ತಾ ಇವೆ. ಮೂಲಸ್ಥಾವರ ಕಟ್ಟು ಕಾಮಗಾರಿಯ ಗುತ್ತಿಗೆದಾರನು ತೀರಿಕೊಂಡಿರುವುದರಿಂದ ಈ ಕೆಲಸಕ್ಕೆ ಮರು ಟೆಂಡರ್ ಕರೆಯಲಾಗಿದೆ. ಸಂಕೇಶ್ವರ ಪಟ್ಟಣದಲ್ಲಿ 4.00 ಲಕ್ಷ ಗ್ಯಾಲನ್ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಾಗಾರ ಕಟ್ಟುವ ಕೆಲಸ ಪ್ರಗತಿಯಲ್ಲಿದೆ. 3.50 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಶುದ್ಧೀಕರಣಗಾರ ಹಾಗೂ 10.00 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಾಗಾರ ಕಟ್ಟುವ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ. ಸಿಬ್ಬಂದಿ ಕಟ್ಟಡ ಕಟ್ಟುವ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಈ ಯೋಜನೆಯನ್ನು ಮಾರ್ಚ 1995ರಲ್ಲಿ ಚಾಲ್ತಿ ಮಾಡಲು ಯೋಜಿಸಲಾಗಿದೆ.

3) ಚಿಕ್ಕೋಡಿ ಪಟ್ಟಣಕ್ಕೆ ಅಭಿವೃದ್ಧಿ ನೀರು ಸರಬರಾಜು ಯೋಜನೆ:-

ಕೃಷ್ಣಾ ನದಿಗೆ ಅಡ್ಡವಾಗಿ ಕಟ್ಟಿರುವ ಕಲ್ಲೋಳ ಬ್ಯಾರೇಜನ್ನು ಮೂಲವಾಗಿಟ್ಟುಕೊಂಡು 247.50 ಲಕ್ಷ ರೂ.ಗಳ ಯೋಜನೆಯೊಂದನ್ನು ಸರ್ಕಾರವು ತನ್ನ ಆಜ್ಞೆ ಸಂಖ್ಯೆ: ವನಇ 15 ಯುಡಬ್ಲ್ಯುಎಸ್ 91, ದಿನಾಂಕ 15-3-91ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಹಣಕಾಸಿನ ವ್ಯವಸ್ಥೆ ಈ ಕೆಳಕಂಡಂತೆ ಇದೆ.

ಹುಡ್ಕೊ ನಿಗಮದ ಸಾಲ	-	ರೂ. 123.75 ಲಕ್ಷ
ಸರ್ಕಾರದ ಸಾಲ	-	ರೂ. 74.25 ಲಕ್ಷ
ಚಿಕ್ಕೋಡಿ ಪುರಸಭೆ ವಂತಿಗೆ	-	ರೂ. 49.50 ಲಕ್ಷ
	ಒಟ್ಟು :	ರೂ. 247.50 ಲಕ್ಷ

ಚಿಕ್ಕೋಡಿ ಪುರಸಭೆಯು 19.00 ಲಕ್ಷ ರೂ.ಗಳನ್ನು ಮಂಡಳಿಗೆ ತುಂಬಿದೆ; ಸರ್ಕಾರದಿಂದ ಹಾಗೂ ಜೀವ ವೀಮಾ ನಿಗಮದಿಂದ 69.00 ಲಕ್ಷ ರೂ.ಗಳು ಬಂದಿದೆ.

ಮೂಲಸ್ಥಾವರದ ಕಾಮಗಾರಿಗಳಿಗೆ ಹಾಗೂ 2 ಕಡೆ ಪಂಪುಗಳನ್ನು ಆಳವಡಿಸಲು ಅಂದರೆ ಒಂದು ಸಕ್ಕರೆ ಕಾರ್ಖಾನೆ ಹತ್ತಿರ ಮತ್ತೊಂದು ಸರಪಳಿ 5100 ಮೀಟರ್ ಹತ್ತಿರ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಸಕ್ಕರೆ ಕಾರ್ಖಾನೆಯಿಂದ ಚಿಕ್ಕೋಡಿ ಪಟ್ಟಣದವರೆಗೆ ಎ.ಸಿ. ಏರು ಕೊಳವೆ ಮಾರ್ಗವನ್ನು ಹಾಕುವ ಕೆಲಸ ಪ್ರಗತಿಯಲ್ಲಿದೆ. ಸಕ್ಕರೆ ಕಾರ್ಖಾನೆ ಹತ್ತಿರ ಹಾಗೂ ಸರಪಳಿ 5100 ಮೀಟರ್ ಹತ್ತಿರ 50,000 ಗ್ಯಾಲನ್ ಸಾಮರ್ಥ್ಯದ ಸಂಪು ಹಾಗೂ ಪಂಪ್‌ಹೌಸ್‌ಕಟ್ಟುವ ಕೆಲಸ ಪ್ರಗತಿಯಲ್ಲಿದೆ. ಆರ್.ಡಿ ಹೈಸ್ಕೂಲ್ ಹತ್ತಿರ 1.50 ಲಕ್ಷ ಗ್ಯಾಲನ್ ಸಾಮರ್ಥ್ಯದ ನೆಲಮಟ್ಟದ ಜನಸಂಗ್ರಹಾಗಾರ ಕಟ್ಟುವ ಕೆಲಸ ಮುಗಿದಿದ್ದು ಹಾಗೂ ಇನ್ನೊಂದು ಎನ್.ಸಿ. ಹೈಸ್ಕೂಲ ಹತ್ತಿರ ಪ್ರಗತಿಯಲ್ಲಿದೆ. 1.00 ದಶಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಶುದ್ಧೀಕರಣಗಾರ ಕಟ್ಟುವ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ. ಈ ಯೋಜನೆಯ ಮೊದಲನೇ

ಹಂತವನ್ನು ಮಾರ್ಚ್ 1993ರಲ್ಲಿ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ. ಯೋಜನೆಯನ್ನು ಸಂಪೂರ್ಣವಾಗಿ ಮಾರ್ಚ 1995 ರ ಚಾಲ್ತಿ ಮಾಡಲು ಯೋಜಿಸಲಾಗಿದೆ.

4) ನಿಪ್ಪಾಣ ನಗರಕ್ಕೆ ಅಭಿವೃದ್ಧಿ ನೀರು ಸರಬರಾಜು ಯೋಜನೆ:-

ವೇದಗಂಗಾ ನದಿಯನ್ನು ಮೂಲವಾಗಿಟ್ಟುಕೊಂಡು 110.00 ಲಕ್ಷ ರೂಗಳ ಯೋಜನೆಯನ್ನು ಸರ್ಕಾರವು ತನ್ನ ಆಜ್ಞೆ ಸಂಖ್ಯೆ : ವನಇ 214 ಯುಎಂಎಸ್ 89, ದಿನಾಂಕ 30-3-90 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಹಣಕಾಸಿನ ವ್ಯವಸ್ಥೆ ಈ ಕೆಳಕಂಡಂತೆ ಇದೆ.

ಜೀವ ವಿಮಾ ನಿಗಮದ ಸಾಲ	-	ರೂ. 55.00 ಲಕ್ಷ
ಸರ್ಕಾರದ ಸಾಲ	-	ರೂ. 22.00 ಲಕ್ಷ
ನಿಪ್ಪಾಣಿ ನಗರಸಭೆ ವಂತಿಕೆ	-	ರೂ. 33.00 ಲಕ್ಷ
	ಒಟ್ಟು	ರೂ. 110.00 ಲಕ್ಷ

ಎಲ್ಲಾ ಮೂಲಗಳಿಂದ ಒಟ್ಟು 81.00 ಲಕ್ಷ ರೂ. ಬಂದಿದೆ .

ಮೂಲಸ್ಥಾವರದ ಕಾಮಗಾರವು ಪ್ರಗತಿಯಲ್ಲಿದೆ, 450 ಮಿ.ಮಿ. ವ್ಯಾಸದ ಪಿ.ಎಸ್.ಸಿ. ಕೊಳವೆ ಮಾರ್ಗಗಳನ್ನು ಹಾಕುವ ಕೆಲಸ ಪ್ರಗತಿಯಲ್ಲಿದೆ. 1.50 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಶುದ್ಧೀಕರಣಗಾರ ಕಟ್ಟುವ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ. ಈ ಯೋಜನೆಯನ್ನು ಮಾರ್ಚ 1994 ರ ಹೊತ್ತಿಗೆ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ.

5) ಸದಲಗಾ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ:-

ಮಾಧಗಂಗಾ ನದಿಯನ್ನು ಮೂಲವಾಗಿಟ್ಟುಕೊಂಡು 65.00 ಲಕ್ಷ ರೂಗಳ ಯೋಜನೆಯನ್ನು ಸರ್ಕಾರವು ತನ್ನ ಆಜ್ಞೆ ಸಂಖ್ಯೆ: ವನಇ 56 ಯುಡಬ್ಲುಎಸ್ 91, ದಿನಾಂಕ 22-1-92ಲ್ಲಿ ಕೊಳವೆ ನೀರು ಸರಬರಾಜು ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಮಂಡಳಿಯ 1992-93ನೇ ಆಯವ್ಯಯದಲ್ಲಿ 10.00 ಲಕ್ಷ ರೂ.ಗಳನ್ನು ಹಾಗೂ 1993-94 ನೇ ಸಾಲಿಗೆ 50.00 ಲಕ್ಷ ರೂ.ಗಳನ್ನು ಮೀಸಲಾಗಿಟ್ಟಿದೆ.

1.00 ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರವನ್ನು ಕಟ್ಟುವ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. 22,000 ಗ್ಯಾಲನ್ ಸಾಮಾರ್ಥ್ಯದ ಸಂಪು ಹಾಗೂ ಪಂಪ್ ಹೌಸ್ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಪಿ.ವಿ.ಸಿ. ವಿಸ್ತರಣಾ ಜಾಲವನ್ನು ಹಾಕಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. 0.75 ದಶಲಕ್ಷ ಗ್ಯಾಲನ್‌ಸಾಮರ್ಥ್ಯದ ಜಲ ಶುದ್ಧೀಕರಣಗಾರ ಕಟ್ಟು ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ. ಮೂಲ ಸ್ಥಾವರದ ಕಾಮಗಾರಿಗೆ ಟೆಂಡರ್ ಕರೆಯಲಾಗಿತ್ತು, ಆದರೆ ಗುತ್ತಿಗೆದಾರನು ಬಹಳ ಹೆಚ್ಚು ದರಗಳನ್ನು ಹಾಕಿರುವುದರಿಂದ ಅ.ಅ., ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವೃತ್ತ, ದಾರವಾಡ ಇವರು ಇದನ್ನು ತಿರಸ್ಕರಿಸಿ ಮತ್ತೆ ಮರು ಟೆಂಡರ್ ಕರೆಯಲಾಗಿದೆ. ಈ ಯೋಜನೆಯನ್ನು ಮಾರ್ಚ 1994 ರ ಹೊತ್ತಿಗೆ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ.

6) ಕುಡಚಿ ನೀರು ಸರಬರಾಜು ಯೋಜನೆ:-

ಕೃಷ್ಣ ನದಿಯ ಕೊಳದಲ್ಲಿ ತೆರೆದ ಬಾವಿಗಳನ್ನು ಮೂಲವಾಗಿಟ್ಟುಕೊಂಡು ಅಂದಾಜುವೆಚ್ಚ ರೂ. 70.00 ಲಕ್ಷಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಐಎಂ. ಶೇಡ್‌ಶ್ಯಾಲ್:- ಮಾನ್ಯಅಧ್ಯಕ್ಷರೇ, ಈ ಸದರಿ ಯೋಜನೆಯು 15-20 ವರ್ಷಗಳಿಂದ ನಡೆಯುತ್ತಾ ಇದೆ. ಆದ್ದರಿಂದ ಈ ಯೋಜನೆಯನ್ನು ಆದಷ್ಟು ತೀವ್ರಗತಿಯಿಂದ ಮುಗಿಸಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುತ್ತೀರಾ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಚೌಡಾರೆಡ್ಡಿ:- ಬೇಗ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

4) ಜಿಲ್ಲಾಪರಿಷತ್ ಮಂಜೂರು ಮಾಡಿದ್ದ ಪಶು ಚಿಕಿತ್ಸಾಲಯಗಳು ಮುಚ್ಚಿರುವುದರಿಂದ ಜಾನುವಾರುಗಳಿಗೆ ತೊಂದರೆ.

ಶ್ರೀ ಬಿ.ಹೆಚ್ ಬನ್ನಿಕೋಡ್(ಹಿರೇ ಕೆರೂರ್):- ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ ಮಂಜೂರು ಮಾಡಿದ ಗ್ರಾಮಾಂತರ ಪಶು ವೈದ್ಯ ಆಸ್ಪತ್ರೆಗಳನ್ನು ಮುಚ್ಚಿರುವುದರಿಂದ ಜಾನುವಾರುಗಳ ಚಿಕಿತ್ಸೆಗೆ ಆಗುತ್ತಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಪಶು ಸಂಗೋಪನಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಎನ್.ನಾಗೇಗೌಡ:- (ಪಶುಸಂಗೋಪನಾ ಸಚಿವರು): ಮಾನ್ಯ ಅಧ್ಯಕ್ಷರೇ

ಜಿಲ್ಲಾ ಪರಿಷತ್‌ನ 1983ನೇ ನಿಬಂಧನೆ, ಅಧ್ಯಾಯ 9, ಕಂಡಿಕೆ 83, ಭಾಗ-3ರಲ್ಲಿ ಸೂಚಿಸಿರುವಂತೆ ಜಿಲ್ಲಾ ಪರಿಷತ್‌ನ ಆಡಳಿತ ವ್ಯಾಪ್ತಿಯಲ್ಲಿ ಪಶುವೈದ್ಯ ಆಸ್ಪತ್ರೆ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಸ್ಥಾಪನೆ ನಿರ್ವಹಣೆಯನ್ನು ಸಂಬಂಧಪಟ್ಟ ಮಂಡಲಗಳ ಸಹಕಾರದೊಂದಿಗೆ ಜಾನುವಾರು ತಳಿ ಸಂವರ್ಧನೆ, ಕುಕ್ಕುಟ ಅಭಿವೃದ್ಧಿ ಹೈನುಗಾರಿಕೆ, ಜಾನುವಾರುಗಳನ್ನು ಸಾಂಕ್ರಾಮಿಕ ರೋಗಗಳಿಂದ ಸಂರಕ್ಷಣೆ, ಮೊದಲಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು 378 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಪ್ರಾರಂಭ ಹಾಗೂ 83 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಸಹ ಉನ್ನತೀಕರಿಸಲಾಗಿದೆ. ಅವುಗಳ ಪೈಕಿ ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬರುವುದಕ್ಕಿಂತ ಮುನ್ನ 10 ಅಂಶಗಳೊಂದಿಗೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಬಂದಿರುವ ಪ್ರಸ್ತಾವನೆಗಳ ಆಧಾರದ ಮೇಲೆ 45 ಕೇಂದ್ರಗಳಿಗೆ ಸರ್ಕಾರದ ಮಂಜೂರಾತಿ ದೊರಕಿರುತ್ತದೆ. ಇನ್ನುಳಿದ 333 ಕೇಂದ್ರಗಳಿಗೆ ಸರ್ಕಾರದ ಅನುಮೋದನೆ ನೀಡಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ 432 ಜಡ್‌ಪಿಎನ್ 87 ದಿನಾಂಕ 2-1-88 ಪ್ರಕಾರ ಸಾಧನೆ, ಸಂಪತ್ತಿನಲ್ಲಿ ಅಭಾವ ಉಂಟಾಗುವುದನ್ನು ತಡೆಗಟ್ಟಲು ಹುದ್ದೆಗಳ ಸೃಷ್ಟಿಯ ಅಧಿಕಾರ ಸರ್ಕಾರದಲ್ಲೇ ಉಳಿದಿರುವ ಬಗ್ಗೆ ಹಾಗೂ ಜಿಲ್ಲಾ ಪರಿಷತ್‌ನವರು ಒತ್ತಾಯ ಪೂರ್ವಕವಾಗಿ ಕೆಲವು ಹುದ್ದೆಗಳನ್ನು ಸೃಷ್ಟಿ ಮಾಡಲು ಬಯಸಿದಲ್ಲಿ ಅವುಗಳನ್ನು ಸರ್ಕಾರದ ಪೂರ್ವಾನುಮತಿಯಿಂದ ಕೈಗೊಳ್ಳಬಹುದೆಂದು ಆದೇಶಿಸಲಾಗಿದೆ.

ಮೇಲ್ಕಂಡ ನಿಯಮಾನುಸಾರದ ಕಾರಣಗಳಿಂದ, ಜಿಲ್ಲಾ ಪರಿಷತ್‌ಗಳು ಸ್ಥಾಪಿಸಿರುವ ಪಶು ಚಿಕಿತ್ಸಾಲಯಗಳಲ್ಲಿ ಹುದ್ದೆಗಳ ಕೊರತೆ ಇದ್ದು, ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಯಲ್ಲಿ ಹಾಲಿ ಇರುವ ಸಿಬ್ಬಂದಿ ವರ್ಗದವರನ್ನು ನಿಯೋಜನೆಯ ಮೇರೆಗೆ, ಸದರಿ ಕೇಂದ್ರಗಳನ್ನು ನಡೆಸಿಕೊಂಡು ಹೋಗಲಾಗುತ್ತಿದೆ.

ಇಲಾಖೆಯಿಂದ ಹಾಗೂ ಜಿಲ್ಲಾ ಪರಿಷತ್‌ನ ಯೋಜನೆಯಡಿಯಲ್ಲಿನ ಅನುಧಾನದ ಸಹಾಯದಿಂದ ಔಷಧಿ/ರಸಾಯನಿಕ ವಸ್ತುಗಳ ಬೇಡಿಕೆಯನ್ನು ಈ ಸಂಸ್ಥೆಗಳಿಗೂ ಸಹಾ ಈಡೇರಿಸಲಾಗುತ್ತಿದ್ದು, ಆದಷ್ಟು ಮಟ್ಟಿಗೆ ಸಂಸ್ಥೆಗಳ ಚೌಕಟ್ಟಿನಲ್ಲಿರುವ ಜಾನುವಾರುಗಳ ಆರೋಗ್ಯ ಸಂರಕ್ಷಣೆ ಮತ್ತು ತಳಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ನ್ಯೂನತೆಗಳನ್ನು ಹಂತ ಹಂತವಾಗಿ ನಿವಾರಿಸಲಾಗುತ್ತಿದೆ.

ಶ್ರೀ ಬಿ.ಹೆಚ್. ಬನ್ನಿಕೋಟ್ :- ಮಾನ್ಯ ಅಧ್ಯಕ್ಷರೆ, ಸಚಿವರು ಈ ಜಿಲ್ಲಾ ಪರಿಷತ್ತು ಪ್ರಾರಂಭಿಸಿ ಮಂಜೂರಾತಿ ಕೊಟ್ಟಂತಹ ಪಶು ವೈದ್ಯ ಕೇಂದ್ರಗಳು ಮತ್ತು ಪಶು ವೈದ್ಯ ಶಾಲೆಗಳಲ್ಲಿ ಕೇವಲ 45ಕ್ಕೆ ಮಾತ್ರ